ಊ) ಹಾಗಿದ್ದಲ್ಲಿ ಈ ಮಳಿಗೆಗಳನ್ನು ಜನಪ್ರಿಯಗೊಳಿಸಲು ಹಾಗೂ ಗ್ರಾಹಕರಿಗೆ ಉಪಯೋಗವಾಗುವಂತೆ ನಡೆಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು)

ಅ) ಬೆಂಗಳೂರು ನಗರದಲ್ಲಿ ಒಟ್ಟು 206 ಹಾಪಕಾಮ್ಸ ಮಾರಾಟ ಮಳಿಗೆಗಳಿವೆ.

ಆ) ಈ ಮಳಿಗೆಗಳಲ್ಲಿ 193 ಮಳಿಗೆಗಳು ಲಾಭದಾಯಕವಾಗಿ ಕೆಲಸ ನಿರ್ವಹಿಸುತ್ತಿವೆ.

ಇ) ಈ ಮಳಿಗೆಗಳ ನಿರ್ವಹಣೆಗಾಗಿ ಪ್ರತಿ ವರ್ಷ ಸುಮಾರು 1.50 ಲಕ್ಷ ರೂ.ಗಳು ಖರ್ಚಾಗುತ್ತವೆ.

ಈ) ಇಲ್ಲ.

ಉ) ಇಲ್ಲ

ಊ) ಪ್ರಶ್ನೆ ಉದ್ಭವಿಸುವುದಿಲ್ಲ.

ಅಂಗಡಿ ಮತ್ತು ಮಳಿಗೆಗಳ ಲೈಸೆನ್ಸ್ ನವೀಕರಣ

685-ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಅಂಗಡಿ ಮತ್ತು ಮಳಿಗೆ ಕಾನೂನಿನ್ವಯ ನೊಂದಾವಣೆ ಮಾಡಲಾಗಿರುವ ಅಂಗಡಿಗಳ ಒಟ್ಟು ಸಂಖ್ಯೆ ಎಷ್ಟು?

ಆ) ಈ ಅಂಗಡಿ ಅಥವಾ ಮಳಿಗೆಗಳ ಪರವಾನಗಿಯನ್ನು ಪ್ರತಿ ವರ್ಷ ಅಂಗಡಿ ಮಾಲೀಕರು ನವೀಕರಿಸ ಬೇಕಾಗಿರುವುದು ನಿಜವಲ್ಲವೇ?

ಇ) ನವೀಕರಿಸಲು ವಿಧಿಸುವ ಶುಲ್ಕವೆಷ್ಟು?

ಈ) ನವೀಕರಿಸುವಲ್ಲಿ ಅಂಗಡಿ ಮಾಲೀಕರಿಗೆ ತೊಂದರೆಯಾಗುತ್ತಿರುವುದು ಹಾಗೂ ಇದರಲ್ಲಿ ಭ್ರಷ್ಟಾಚಾರ ಅಡಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ 5 ವರ್ಷಕ್ಕೊಮ್ಮೆ ಈ ಅಂಗಡಿ ಅಥವಾ ಮಳಿಗೆಗಳ ಪರವಾನಗಿಯನ್ನು ನವೀಕರಿಸುವ ಪದ್ಧತಿಯನ್ನು ಸರ್ಕಾರ ಜಾರಿಗೆ ತರಲು ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಸಿ. ಗುರುನಾಥ್ (ಕಾರ್ಮಿಕ ಸಚಿವರು):

ಅ) 59,723

ಆ) ಹೌದು

ಇ) ನವೀಕರಿಸಲು ಶುಲ್ಕ ಈ ಕೆಳಕಂಡಂತೆ ಇದೆ:

ಕ್ರ. ಸಂ.	ಸಂಸ್ಥೆಗಳ ವರ್ಗೀಕರಣ	ಶುಲ್ಕ ರೂ.
1.	ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ ಕೆಲಸಗಾರರೇ ಇರದ ಪಕ್ಷದಲ್ಲಿ	25-00
2.	1 ರಿಂದ 9 ಕಾರ್ಮಿಕರನ್ನೊಳಗೊಂಡ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು	50-00
3.	1]0ರಿಂದ 19 ಕಾರ್ಮಿಕರನ್ನೊಳಗೊಂಡ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು	500-00
4.	20 ರಿಂದ 49 ಕಾರ್ಮಿಕರನ್ನೊಳಗೊಂಡ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು	1,250-00
5.	50 ರಿಂದ 99 ಕಾರ್ಮಿಕರನ್ನೊಳಗೊಂಡ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು	2,500-00
6.	100 ಮತ್ತು ಮೇಲ್ಪಟ್ಟು ಕಾರ್ಮಿಕರನ್ನೊಳಗೊಂಡ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು	3,000-00

ಆ) ಬಂದಿರುವುದಿಲ್ಲ.

ಇ) ಸರ್ಕಾರದ ಪರಿಶೀಲನೆಯಲ್ಲಿದೆ.

ಕೃಷಿ ಮಾರುಕಟ್ಟೆ ಇಲಾಖೆ ನೌಕರರು ಕುರಿತು.

690 - ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೃಷಿ ಮಾರುಕಟ್ಟೆ ಸಮಿತಿ ಸೇವೆ ಹಾಗೂ ಮಾರಾಟ ಇಲಾಖೆಯ ನೌಕರರ ಸೇವೆಯನ್ನು ಒಂದು ಮಾಡಿ ವಿಲೀನಗೊಳಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆಯೇ ?

ಆ) ಹಾಗಿದ್ದರೆ ನೌಕರರ ಸೇವಾ ಜೇಷ್ಠತೆಯನ್ನು ಯಾವ ದಿನಾಂಕದಿಂದ ಪರಿಗಣಿಸಲಾಗುವುದು ?

ಶ್ರೀ ಬಿ.ಬಿ. ನಿಂಗಯ್ಯ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):

ಅ) ಹೌದು.

ಆ) ನೌಕರರ ಸೇವಾ ಜೇಷ್ಠತೆಯನ್ನು ಕರ್ನಾಟಕ ಸರ್ಕಾರಿ ನೌಕರರ (ಸೇವಾ ಹಿರಿತನ) ನಿಯಮಗಳು 1957ರ ನಿಯಮ 6ರ ಪ್ರಕಾರ ಪರಿಗಣಿಸಲಾಗುವುದು.